(ಇ) ಕೇಂದ್ರ ಸರಕಾರವು ಮಾರಾಟಕ್ಕೆ ಅನುಮತಿ ನೀಡುವಾಗ ರಾಜ್ಯ ಸರ್ಕಾರದೊಡನೆ ಪೂರ್ವ ಪರ್ಯಾಲೋಚನೆ ನಡೆಸಿರುವರೇ ?

Sri D. DEVARAJ URS (Chief Minister).—

ಉತ್ತರ.—(ಅ) (ಆ) (ಇ).—The question of removal of inalienability clauses from the Covenants / Merger Agreement is still under the consideration of the Government of India

ಸಿದ್ದಾಪುರ A.P.M.C. ಸೊಸೈಟಿಯ ಅಕ್ರಮ ವ್ಯವಹಾರ

ಶ್ರೀ ಎಂ. ಪಿಚ್. ಜಯಪ್ರಕಾಶ ನಾರಾಯಣ್ (ಶಿರ್ಸಿ).—

೧೦. (೧೭)—ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದಲ್ಲಿ ನಿಯಮಗಳನ್ನು ಉಲ್ಲಂಘಿಸಿ ಸುಮಾರು ೩ ಲಕ್ಷ ರೂ. ಹಣವನ್ನು ವ್ಯಾಪಾರಸ್ಥರಿಗೆ ಸಾಲವಾಗಿ ಕೊಟ್ಟಿರುವುದರ ಬಗ್ಗೆ ಗುಡ್ಡೇಕೊಪ್ಪದ ನಿವಾಸಿಗಳೊಬ್ಬರು ಸರ್ಕಾರದ ಗಮನಕ್ಕೆ ತಂದಿರುವುದು ನಿಜವೆ ;

(ಆ) ಈ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು ;

(ಇ) ಕೊಟ್ಟಿರುವ ಸಾಲ ವಸೂಲಿ ಮಾಡಲು ಸಂಘದವರು ತೆಗೆದುಕೊಂಡ ಕ್ರಮ ಗಳಾವುವು? ಏನೂ ಆಸ್ತಿಪಾಸ್ತಿ ಇಲ್ಲದವರಿಗೆ ಸಾಲಕೊಟ್ಟಿರುವುದರಿಂದ ಅದನ್ನು ವಸೂಲಿ ಮಾಡುವ ಮಾರ್ಗಗಳಾವುವು ;

(ಈ) ಈ ಸಂಘದಲ್ಲಿ 3 ಲಕ್ಷ 30 ಸಾವಿರ ಸರ್ಕಾರಿ ಷೇರು ಮೊಬಲಗು ಸುಮಾರು 1 ಲಕ್ಷ 20 ಸಾವಿರ, ಖಾಸಗಿ ಷೇರು ಮೊಬಲಗು ಇರುವುದರಿಂದ ಅದರ ರಕ್ಷಣೆಗೆ ಸರ್ಕಾರ ಕೈಗೊಂಡಿರುವ ಸೂಕ್ತ ಕ್ರಮಗಳಾವುವು?

ಶ್ರೀ ಎ. ಶಂಕರ ಆಳ್ವ. (ಸಹಕಾರ ಸಚಿವರು)

ಉತ್ತರ.—(ಅ) ವ್ಯಾಪಾರಸ್ಥರಿಗೆ ಕ್ರೆಡಿಟ್ಟಿನ ಹೊರಗೆ ಮಹಸೂಲನ್ನು ಕೊಟ್ಟು ಅವರ ಮೇಲೆಯೇ ಲಕ್ಷಗಟ್ಟಲೆ ಬಾಕೀ ಮಾಡಿಕೊಂಡಿದ್ದಾರೆಂದು ಸಂಘದ ಮೇಲೆ ಗುಡ್ಡೇಕೊಪ್ಪದ ಸೀತಾರಾಮ ನಾರಾಯಣಭಟ್ಟ ಎನ್ನುವವರು ರಿಜಿಸ್ಟ್ರಾರ್‌ರವರಿಗೆ ದೂರು ಕೊಟ್ಟಿದ್ದಾರೆ.

(ಆ) ಈ ಬಗ್ಗೆ ತನಿಖೆ ನಡೆಸಿ ವರದಿ ತರಿಸಿಕೊಳ್ಳಲಾಗಿದೆ ; ವರದಿ ಪರಿಶೀಲನೆಯಲ್ಲಿದೆ. ಸಂಘದವರು ಬಾಕೀ ವಸೂಲಿಗೆ ಕಾನೂನಿನನ್ವಯ, ಕ್ರಮ ತೆಗೆದುಕೊಂಡಿದ್ದಾರೆ.

(ಇ) ಸಂಘವು ವ್ಯಾಪಾರಸ್ಥರಿಗೆ ಯಾವ ರೀತಿಯ ಸಾಲವನ್ನು ಕೊಟ್ಟಿಲ್ಲ ; ಆದರೆ ಸಂಘವು ವ್ಯಾಪಾರಿ ರೂಢಿಯ ಪ್ರಕಾರ ಕೆಲ ವ್ಯಾಪಾರಸ್ಥರೊಂದಿಗೆ ಟ್ರೇಡ್ ಲಿಮಿಟ್ ವ್ಯವಸ್ಥೆ ಹೊಂದಿದೆ : ಇದರಲ್ಲಿ ಸಂಘಕ್ಕೆ ಕೆಲ ಬಾಕೀ ಬರಬೇಕಾಗಿದ್ದು ಕಾನೂನು ಪ್ರಕಾರ ಬಾಕೀದಾರರ ಆಸ್ತಿ ಪಾಸ್ತಿಗಳನ್ನು ದಾವಾ ತೀರ್ಮಾನಕ್ಕೆ ಪೂರ್ವಾನ್ವಯವಾಗಿ ಅಟ್ಯಾಚ್ ಮಾಡಲಾಗಿದೆ: ಮತ್ತೆ ಕೆಲ ಸಾಲಗಳು ಭದ್ರಪಡಿಸಲ್ಪಟ್ಟವುಗಳಾಗಿವೆ : ಒಬ್ಬ ಖರೀದಿದಾರರ (ಆಸಾಮಿಯಿಂದ) ರೂ. 1,385–16) ಬಾಕಿಯಿದ್ದು ಇದಕ್ಕೆ ಯಾವ ಭದ್ರತೆಯೂ ಇರುವುದಿಲ್ಲ. ಈ ಬಾಕಿ ವಸೂಲಿಗೆ ಸೂಕ್ತ ಕ್ರಮ ಕೈಗೊಳ್ಳಲು ಆದೇಶ ನೀಡಲಾಗಿದೆ.

(ಈ) ಜಿಲ್ಲಾ ಸಹಕಾರಿ ಬ್ಯಾಂಕಿನಿಂದ ಎರವಲು ಪಡೆದು ಒಬ್ಬ ಮ್ಯಾನೇಜರ್ ಮತ್ತು ಕೇಂದ್ರ ಸಹಕಾರೀ ಬ್ಯಾಂಕ್ ಹಾಗೂ ಸರಕಾರದ ಪರ, ಒಬ್ಬೊಬ್ಬ ಪ್ರತಿನಿಧಿಗಳು ಕಾರ್ಯಕಾರೀ ಮಂಡಲಿಯಲ್ಲಿ ನೇಮಕಗೊಂಡಿರುತ್ತಾರೆ ಹಾಗೂ ಸಂಘದ ಲೆಕ್ಕವನ್ನು ನಿಯಮಿತ ಕಾರ್ಯಕ್ರಮದ ಪ್ರಕಾರ ಆಡಿಟ್ ನಡೆಯಲು ಕಾರ್ಯಕ್ರಮ ಇಟ್ಟಿರುತ್ತೆ :

ಅಕ್ರಮ ದಾಸ್ತಾನು ಸಂಗ್ರಹಣೆ ಪತ್ತೆ

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ (ಶಿರ್ಸಿ).—

11. (18) ಆಹಾರ ಹಾಗೂ ನಿತ್ಯೋಪಯೋಗಿ ಸರಬರಾಜು ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೇ.—

(ಅ) ಕಳೆದ ಒಂದು ವರ್ಷದಿಂದ ಅಗತ್ಯವಸ್ತು ಕಾಯಿದೇ ಉಲ್ಲಂಘಿಸಿ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ವರ್ತಕರು ಎಷ್ಟೆಷ್ಟು ಧಾನ್ಯಗಳನ್ನು (ಭತ್ತ, ಅಕ್ಕಿ, ರಾಗಿ, ಜೋಳ, ಸಕ್ಕರೆ ಮತ್ತು ಸೀಮೆಎಣ್ಣೆ) ಅಕ್ರಮವಾಗಿ ಶೇಖರಿಸಿಟ್ಟಿದ್ದರು ;

(ಆ) ಈ ರೀತಿ ಅಕ್ರಮವಾಗಿ ಶೇಖರಿಸಿಟ್ಟಿದ್ದ ಅಗತ್ಯ ದಾಸ್ತಾನುಗಳು ಪತ್ತೆ ಹಚ್ಚಿ ಪೋಲೀಸರು ವಶಪಡಿಸಿಕೊಂಡ ದಾಸ್ತಾನುಗಳ ಪ್ರಮಾಣವೆಷ್ಟು ;

(ಇ) ಈ ರೀತಿ ಅಕ್ರಮವಾಗಿ ಶೇಖರಿಸಿಟ್ಟಿದ್ದ ವರ್ತಕರುಗಳ ಮೇಲೆ ಪೋಲೀಸಿನವರು ಹೂಡಿರುವ ಮೊಕದ್ದಮೆಗಳೆಷ್ಟು ;

(ಈ) ಯಾವ ಯಾವ ಮೊಕದ್ದಮೆಗಳಲ್ಲಿ ಯಾವ ಯಾವ ವರ್ತಕರಿಗೆ ಯಾವ ಯಾವ ರೀತಿಯ ಶಿಕ್ಷೆ ಕೊಡಲಾಗಿದೆ?

ಆಹಾರ ಹಾಗೂ ನಿತ್ಯೋಪಯೋಗಿ ಸರಬರಾಜು ರಾಜ್ಯ ಮಂತ್ರಿಗಳು (ಶ್ರೀಮತಿ ಇವಾವಾಜ್).—

ಉತ್ತರ.—(ಅ) (ಆ) ವಿವರಗಳಿಗೆ ಲಗತ್ತಿಸಿರುವ ಪಟ್ಟಿಯನ್ನು ವಿಧಾನಸಭೆಯ ಗ್ರಂಥಾಲಯದಲ್ಲಿಡಲಾಗಿದೆ.

(ಇ) 928 ಮೊಕದ್ದಮೆಗಳು.

(ಈ) ವಿವರಗಳಿಗೆ ಲಗತ್ತಿಸಿರುವ ಪಟ್ಟಿಯನ್ನು ವಿಧಾನಸಭೆಯ ಗ್ರಂಥಾಲಯದಲ್ಲಿಡಲಾಗಿದೆ.

ಪ್ರಾಥಮಿಕ ಕಡ್ಡಾಯ ಶಿಕ್ಷಣ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ (ಶಿರ್ಸಿ) :—

12. (20).—ಮಾನ್ಯ ವಿದ್ಯಾಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ರಾಜ್ಯದಲ್ಲಿ ಪ್ರಾಥಮಿಕ ಕಡ್ಡಾಯ ಶಿಕ್ಷಣ ಕಾಯಿದೆ ಅನುಸರಿಸಿ 1971–72ನೆಯ ಸಾಲಿನಲ್ಲಿ ಶಾಲೆಗೆ ಸೇರಲು ಅರ್ಹತೆ ಪಡೆದಿರುವ ವಯಸ್ಸಿನ ಹೆಣ್ಣು ಮತ್ತು ಗಂಡು ಮಕ್ಕಳೆಷ್ಟು